**ಹೆಂಡತಿ:** ರೀ... ನಿಮ್ಮ ತಲೇಲಿ ಸ್ವಲ್ಪಾನೂ ಬುದ್ಧಿ ಇಲ್ಲವೇ ಇಲ್ಲ.
**ಗಂಡ:** ಅದಕ್ಕೇ ಅಲ್ವಾ ನಿನ್ನ ಮದುವೆ ಆಗಿದ್ದು.

***

ಎರಡು ತಿಂಗಳಿಂದ ಕಾಣೆಯಾಗಿದ್ದ ಗುಂಡ ಮನೆಗೆ ಬಂದಾಗ ಹೆಂಡ್ತಿ ಕೇಳಿದ್ಲು...
**ಹೆಂಡತಿ:** ಎಲ್ಲಿಗೆ ಹೋಗಿದ್ರಿ? ಕೊರೊನಾ ಬಂದು ನಾನೇನಾದ್ರು ಸತ್ತು ಹೋಗಿದ್ರೆ ಏನ್‌ಮಾಡ್ಬೇಕಿತ್ತು?
**ಗುಂಡ:** ನಾನೇನಾದ್ರೂ ಸ್ಮಶಾನದ ಬಾಗಿಲ ಕೀ ತಗೊಂಡ್ ಹೋಗಿದ್ನಾ!

***

**ಗುಂಡ:** ಡಾಕ್ಟರೇ ನನಗೆ ಸದಾ ಬಾಯಲ್ಲಿ ಏನಾದ್ರೂ ಅಗಿಯುತ್ತಲೇ ಇರಬೇಕು ಅಂತ ಅನ್ನಿಸುತ್ತೆ.
**ಡಾಕ್ಟ್ರು:** ಹೌದಾ..? ಈಗ ಏನು ಅಗಿತಾ ಇದೀರಾ?
**ಗುಂಡ:** ನಿಮಗೆ ಕೊಡಬೇಕಿದ್ದ ಇನ್ನೂರು ರೂಪಾಯಿ ನೋಟು ಡಾಕ್ಟ್ರೇ.

***



ಪಿಎಸ್‌ಐ ನೇಮಕಾತಿ ಅಕ್ರಮ
ಹೊಸಬರ ಕೆಲಸದ ಶೈಲಿ ನೋಡಿ ಸಂಶಯ ಬರ್ತಿತ್ತು ಸರ್! ಪೋಲಿಸ್ ಕಸ್ಟಡಿ ಕಂಡ್ರೆ ಭಯ ಪಡ್ತಿದ್ರು!

**ಮೇಷ್ಟ್ರು:** ನಾನು ನಿನ್ನ ವಯಸ್ಸಿನಲ್ಲಿ ರಾತ್ರಿ ಹೊತ್ತು ಮೇಣದ ಬತ್ತಿ ಹಚ್ಚಿ ಓದ್ತಿದ್ದೆ ಗೊತ್ತಾ?
**ಗುಂಡ:** ಅಷ್ಟು ಕಷ್ಟಪಟ್ಟು ಓದೋದಕ್ಕಿಂತ ಹಗಲು ಹೊತ್ತಿನಲ್ಲಿ ಓದಬಹುದಿತ್ತಲ್ವ ಸರ್!

***

**ಹುಡುಗಿ:** ನೀವು ಹುಡುಗರು ಯಾಕೆ ಯಾವಾಗಲೂ ವಾಟ್ಸಾಪ್ ನಂಬರ್ ಕೇಳ್ತೀರಾ?
**ತಿಮ್ಮ:** ಒಂದೇ ಸಲ ಡೋರ್ ನಂಬರ್ ಕೇಳಿದ್ರೆ ಚೆನ್ನಾಗಿರೋದಿಲ್ವಲ್ಲ ಅದಕ್ಕೆ!

***

**ಚಿಂಟು:** ಅಮ್ಮ, ಸ್ಕೂಲ್‌ನಲ್ಲಿ ಮಿಸ್ ತುಂಬಾ ಹೊಡೆಯುತ್ತಾರಮ್ಮ.
**ಅಮ್ಮ:** ತುಂಬಾ ಗಲಾಟೆ ಮಾಡ್ತಿಯೇನೋ?
**ಚಿಂಟು:** ಇಲ್ಲಾ ಅಮ್ಮಾ, ಸುಮ್ಮನೆ ಮಲಗಿದ್ರೂ ಎಬ್ಬಿಸಿ ಎಬ್ಬಿಸಿ ಹೊಡೀತಾರೆ.

***

**ಕುಡುಕ 1:** ನಾನು ವಿಧಾನಸೌಧ ಖರೀದಿಸ್ತೀನಿ.
**ಕುಡುಕ 2:** ಇದೇ ಖುಷಿಗೆ ಇನ್ನೊಂದು 90 ಹೇಳು.

***

**ಡಾಕ್ಟರ್:** ನಿಮ್ಮ ದೇಹದಲ್ಲಿ 265 ಮೂಳೆಗಳಿವೆ.
**ಗುಂಡ:** ಮೆಲ್ಲಗೆ ಹೇಳಿ ಡಾಕ್ಟ್ರೇ. ನನ್ನ ಹಿಂದೆ ನಾಯಿ ಕುಳಿತಿದೆ.

***

ಹೆಂಡತಿ: ರೀ... ಸ್ವರ್ಗದಲ್ಲಿ ಗಂಡನ ಜೊತೆ ಹೆಂಡತಿ ಇರೋಕೆ ಬಿಡಲ್ವಂತೆ ಹೌದಾ?
**ಗಂಡ:** ಅದ್ಕೆ ಕಣೇ ಅದನ್ನು ಸ್ವರ್ಗ ಅಂತ ಅನ್ನೋದು.

***

**ಪತ್ರಕರ್ತ:** ಪೆಟ್ರೋಲ್ ಬೆಲೆ ದುಬಾರಿ ಆಗ್ತಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?
**ಗುಂಡ:** ನೋಡಿ... ಪೆಟ್ರೋಲ್ ಬೆಲೆ ಎಷ್ಟೇ ಜಾಸ್ತಿಯಾದ್ರೂ ನಾನು ಮೊದಲು ₹100ಗೆ ಹಾಕಿಸ್ತಿದ್ದೆ, ಈಗ್ಲೂ ಅಷ್ಟಕ್ಕೆ ಹಾಕಿಸ್ತೀನಿ.

***

**ಸುಬ್ಬ:** ಈವತ್ತು ನನ್ನ ಹೆಂಡತಿ ವಾಚ್‌ಮನ್ ಜೊತೆ ಸಿನಿಮಾಕ್ಕೆ ಹೋಗೋದು ನೋಡಿದೆ.
**ತಿಮ್ಮ:** ನೀನು ಅವರ ಹಿಂದೆ ಹೋಗ್ಲಿಲ್ವಾ?
**ಸುಬ್ಬ:** ಇಲ್ಲ ಇಲ್ಲ... ಆ ಸಿನಿಮಾವನ್ನ ನಾನು ಮೊದಲೇ ನೋಡಿದ್ದೆ.

***

ಗುಂಡ ಹೆಂಡತಿಯನ್ನು ಕರೆದು ತನ್ನ ಜೊತೆ ಮಾತನಾಡಲು ಮನವಿ ಮಾಡಿದ.
**ಹೆಂಡತಿ:** ಅದೇನು? ನಾನು ಮಾತನಾಡಿದರೆ ತಲೆನೋವು ಅನ್ನೋರು ಇವತ್ತು ಮಾತಾಡೋಕೆ ಕರಿಯುತ್ತಿದ್ದಿರಲ್ಲ?
**ಗುಂಡ:** ಏನ್ನಿಲ್ಲ ಕಣೇ, ತುಂಬ ತಲೆ ನೋಯುತ್ತಿತ್ತು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಅನ್ನುವ ಮಾತಿದೆ ಅಲ್ವಾ. ಅದಕ್ಕೆ ನಿನ್ನ ಜೊತೆ ಮಾತನಾಡೋಣ ಅಂತ.

***

**ಹೆಂಡತಿ:** ನಾನು ಯಾವುದಾದರೂ ಕೆಲಸ ಶುರುಮಾಡಿದರೆ, ಅದರಲ್ಲೇ ಮುಳುಗಿ ಹೋಗ್ತೇನೆ.
**ಗಂಡ:** ಚಿನ್ನ... ನೀನ್ಯಾಕೆ ಬಾವಿ ತೋಡಬಾರದು.

ಸಂಗ್ರಹ: ಶರದ ಕುಲಕರ್ಣಿ, ಬೀದರ್


SANDHILIN सन्धिलिन
ಸಂಧಿಲಿನ್
ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!
ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph.: 0820 2520852, 89709 77513
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.